

# ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ, 2009

धर्मो रक्षति रक्षितः

## ಮಕ್ಕಳಿಗಾಗಿ ಮಾಹಿತಿ ಕೈಪಿಡಿ

ಮಗು ಮತ್ತು ಕಾನೂನು ಕೇಂದ್ರ
ನ್ಯಾಷನಲ್ ಲಾ ಸ್ಕೂಲ್ ಆಫ್
ಇಂಡಿಯಾ ಯುನಿವರ್ಸಿಟಿ
ಬೆಂಗಳೂರು

ಸಿದ್ಧಪಡಿಸಿದವರು
ಕೃತಿಕ. ಬಿ. ಎಸ್. ಮತ್ತು ಶೃತಿ ರಾಮನ್
ಸಂಶೋಧನಾ ಸಮಾಲೋಚಕರು
ಸಿ.ಸಿ.ಎಲ್., ಎನ್.ಎಲ್.ಎಸ್.ಐ.ಯು.

ಪರಿಕಲ್ಪನೆ
ಡಾ. ನಿರಂಜನಾರಾಧ್ಯ. ವಿ. ಪಿ.
ಫೆಲೋ ಮತ್ತು ಕಾರ್ಯಕ್ರಮದ ಮುಖ್ಯಸ್ಥರು
ಸಮಾನ ಗುಣಮಟ್ಟದ ಶಾಲಾ ಶಿಕ್ಷಣ ಸಾರ್ವತ್ರೀಕರಣ
ಕಾರ್ಯಕ್ರಮ
ಸಿ.ಸಿ.ಎಲ್., ಎನ್.ಎಲ್.ಎಸ್.ಐ.ಯು.

ಗ್ರಾಫಿಕ್ಸ್ ಮತ್ತು ಡಿಸೈನ್
ಅದಿತಿ ಸುರೇಂದ್ರ ಮತ್ತು ಶೊನಾಲಿ ಚೆಂಜ಼ೆರ

ಹೆಸರು: ______________________

ವಯಸ್ಸು: ____________________

ತರಗತಿ: _____________________

ಶಾಲೆ: ______________________

ವಿಳಾಸ: ______________________

______________________________

______________________________


______________________________

ದೂರವಾಣಿ ಸಂಖ್ಯೆ:

______________________________


# ಪ್ರಕರಣ 1

ಜಮ್ಮು ಕಾಶ್ಮೀರ ರಾಜ್ಯ ಒಂದನ್ನು ಬಿಟ್ಟು ಭಾರತದಲ್ಲಿ ಇರುವ ಬೇರೆ ಎಲ್ಲಾ ರಾಜ್ಯಗಳ ಮಕ್ಕಳಿಗೂ ಇದು ಅನ್ವಯಿಸುತ್ತದೆ. ಆದರೆ ಇದು ಮದ್ರಸಾಗಳು, ವೈದಿಕ ಪಾಠಶಾಲೆಗಳು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಅನ್ವಯಿಸುವುದಿಲ್ಲ.




# ಪ್ರಕರಣ 2


ಈ ಪ್ರಕರಣವು ಕಾಯ್ದೆಯಲ್ಲಿ ಬಳಸಿರುವ ಕೆಲವು ಶಬ್ದಗಳ ಅರ್ಥವನ್ನು ವಿವರಿಸುತ್ತದೆ.




# ಪ್ರಕರಣ 3

06 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ 01 ರಿಂದ 08ನೇ ತರಗತಿಯವರೆಗೆ ಉಚಿತ ಶಿಕ್ಷಣವನ್ನು ತಮ್ಮ ನೆರೆಹೊರೆಯ ಶಾಲೆಯಲ್ಲಿ ಕಡ್ಡಾಯವಾಗಿ ಪಡೆಯುವ ಹಕ್ಕು ಇದೆ. ಯಾವುದೇ ರೀತಿಯ ಅಂಗವಿಕಲತೆ ಹೊಂದಿರುವ ಮಕ್ಕಳಿಗೂ ಸಹ ಈ ಹಕ್ಕು ಸಮಾನವಾಗಿ ಇರುತ್ತದೆ.



# ಪ್ರಕರಣ 4




ನಿಮ್ಮ ವಯಸ್ಸು 6 ರಿಂದ 14 ವರ್ಷ ಆಗಿದ್ದು, ನೀವು ಯಾವುದೇ ಶಾಲೆಗೆ ಸೇರಿರದೇ ಇದ್ದಲ್ಲಿ ಅಥವಾ ಸೇರಿದ್ದರೂ ಪ್ರಾಥಮಿಕ ಶಿಕ್ಷಣವನ್ನು (೮ನೇ ತರಗತಿಯ ವರೆಗೆ) ಪೂರ್ಣಗೊಳಿಸುವ ಮೊದಲೇ ಶಾಲೆ ಬಿಟ್ಟಿದ್ದರೆ, ನಿಮ್ಮ ವಯಸ್ಸಿಗೆ ಸೂಕ್ತವಾದ ತರಗತಿಗೆ ಸೇರಿಕೊಳ್ಳುವ ಹಕ್ಕು ನಿಮಗೆ ಇದೆ. ಹಾಗೆ ಶಾಲೆಗೆ ಸೇರಿದ ನಂತರ ನಿಮ್ಮ ಸಹಪಾಠಿಗಳ ಸಮಕ್ಕೆ ಕಲಿಯುವಂತೆ ಸಹಾಯವಾಗಲು ವಿಶೇಷ ತರಬೇತಿಯನ್ನು ಪಡೆಯುವ ಹಕ್ಕು ಇದೆ ಮತ್ತು 14 ವರ್ಷ ಆದ ಮೇಲೂ ಪ್ರಾಥಮಿಕ ಶಿಕ್ಷಣ (೮ನೇ ತರಗತಿ) ಪೂರೈಸುವವರೆಗೆ ಉಚಿತ ಶಿಕ್ಷಣವನ್ನು ಪಡೆಯುವ ಹಕ್ಕು ಇದೆ.






# ಪ್ರಕರಣ 5

ನಿಮ್ಮ ಶಿಕ್ಷಣವನ್ನು ಮುಂದುವರಿಸಲು, ನಿಮಗೆ ಬೇರೆ ಶಾಲೆಗೆ ವರ್ಗಾವಣೆ ಪಡೆಯುವ ಹಕ್ಕು ಇದೆ. ನೀವು ಈ ಹಿಂದೆ ಓದುತ್ತಿದ್ದ ಶಾಲೆಯವರು ಕೂಡಲೇ ವರ್ಗಾವಣೆ ಪ್ರಮಾಣ ಪತ್ರವನ್ನು ನೀಡಬೇಕು. ಹಾಗೆಯೇ, ವರ್ಗಾವಣೆ ಪ್ರಮಾಣ ಪತ್ರವನ್ನು ಸಲ್ಲಿಸುವಲ್ಲಿನ ವಿಳಂಬವು ನೀವು ಇತರೆ ಶಾಲೆಗೆ ಸೇರಿಸಿಕೊಳ್ಳಲು ವಿಳಂಬ ಮಾಡುವುದಕ್ಕಾಗಲೀ ಅಥವಾ ನಿರಾಕರಿಸುವುದಕ್ಕಾಗಲೀ ಕಾರಣವಾಗುವಂತಿಲ್ಲ.



# ಪ್ರಕರಣ 6

ನಿಮ್ಮ ನೆರೆಹೊರೆಯಲ್ಲಿ ಶಾಲೆ ಇಲ್ಲದಿದ್ದರೆ, ತಕ್ಷಣ ಸರ್ಕಾರ ಈ ಕೆಳಗಿನಂತೆ ಶಾಲೆ ಸ್ಥಾಪಿಸಬೇಕು:


1 ಕಿಲೋಮೀಟರ್ ದೂರದೊಳಗೆ ಕಿರಿಯ ಪ್ರಾಥಮಿಕ ಶಾಲೆ (1 ರಿಂದ 5ನೇ ತರಗತಿ)

3 ಕಿಲೋಮೀಟರ್ ದೂರದೊಳಗೆ ಹಿರಿಯ ಪ್ರಾಥಮಿಕ ಶಾಲೆ (6 ರಿಂದ 8ನೇ ತರಗತಿ)

5 ಕಿಲೋಮೀಟರ್ ದೂರದೊಳಗೆ ಪ್ರೌಢ ಶಾಲೆ (9 ರಿಂದ 10ನೇ ತರಗತಿ)

# ಪ್ರಕರಣ 7


ಈ ಕಾಯ್ದೆಯನ್ನು ಕಾರ್ಯರೂಪಕ್ಕೆ ತರಲು ಬೇಕಾದ ಹಣವನ್ನು ಒದಗಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸಮಾನವಾಗಿ ಜವಾಬ್ದಾರಿಯನ್ನು ಹೊಂದಿರುತ್ತಾರೆ.



# ಪ್ರಕರಣ 8

ಸರ್ಕಾರವು 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕು. ಇದಕ್ಕಾಗಿ ನಿಮ್ಮ ನೆರೆಹೊರೆಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಇರುವಂತಹ ಶಾಲೆ, ಬೇಕಾದಷ್ಟು ಶಿಕ್ಷಕರು, ಕಲಿಕಾ ಸಾಮಗ್ರಿ, ಕ್ರೀಡಾ ಸಾಮಗ್ರಿ, ಅಗತ್ಯವಿದ್ದಲ್ಲಿ ನಿಮಗೆ ವಿಶೇಷ ತರಬೇತಿಗೆ ಸೌಲಭ್ಯ, ಶಿಕ್ಷಕರಿಗೆ ತರಬೇತಿ ಎಲ್ಲವನ್ನು ಸರ್ಕಾರ ಒದಗಿಸಬೇಕು. ಜೊತೆಗೆ ನಿಮ್ಮ ಲಿಂಗ, ಜಾತಿ, ಮತ, ವರ್ಗ, ಗುಂಪು, ವಾಸಿಸುವ ಜಾಗ ಅಥವ ಇನ್ನಾವುದೇ ಕಾರಣಕ್ಕೆ ನಿಮ್ಮ ವಿರುದ್ಧ ತಾರತಮ್ಯ ಮಾಡದೆ ಇರುವಂತೆ ಮತ್ತು ಇದರಿಂದ ನೀವು ಶಿಕ್ಷಣ ಪಡೆಯುವುದಕ್ಕೆ ತೊಂದರೆ ಆಗದೆ ಇರುವಂತೆ ನೋಡಿಕೊಳ್ಳಬೇಕು.






# ಪ್ರಕರಣ 9

ಪಂಚಾಯಿತಿ, ನಗರ ಸಭೆ, ಪುರಸಭೆ ಇವೆಲ್ಲವು ಪ್ರಕರಣ ೮ರಲ್ಲಿ ಹೇಳಿದ ಎಲ್ಲಾ ಕರ್ತವ್ಯಗಳನ್ನು ಪೂರ್ತಿಮಾಡಬೇಕು. ಇದರ ಜೊತೆಗೆ ತಮ್ಮ ವ್ಯಾಪ್ತಿಯಲ್ಲಿ ಅಗತ್ಯ ಇರುವಷ್ಟು ಶಾಲೆಗಳು ಇರುವಂತೆ ನೋಡಿಕೊಳ್ಳಬೇಕು. ಅವರ ಪ್ರದೇಶದಲ್ಲಿ ಇರುವ ಎಲ್ಲಾ ಮಕ್ಕಳ ವಿವರಗಳ ದಾಖಲಾತಿ ಹೊಂದಿರಬೇಕು. ಎಲ್ಲಾ ಮಕ್ಕಳು ಶಾಲೆಗೆ ಸೇರುವಂತೆ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ತಿ ಮಾಡುವಂತೆ ನೋಡಿಕೊಳ್ಳಬೇಕು.

# ಪ್ರಕರಣ 10

ತಂದೆ – ತಾಯಿ ಅಥವ ಪೋಷಕರು ತಮ್ಮ ಮಕ್ಕಳನ್ನು ಹತ್ತಿರದ ಶಾಲೆಗೆ ಕಡ್ಡಾಯವಾಗಿ ಸೇರಿಸಬೇಕು.




# ಪ್ರಕರಣ 11

3 ರಿಂದ 6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೂರ್ವ–ಪ್ರಾಥಮಿಕ ಶಿಕ್ಷಣವನ್ನು ಸರ್ಕಾರ ಒದಗಿಸಬೇಕು.

# ಪ್ರಕರಣ 12


ಸರ್ಕಾರಿ ಶಾಲೆಗಳು ಎಲ್ಲಾ ಮಕ್ಕಳಿಗೆ ಉಚಿತ ಶಿಕ್ಷಣ ನೀಡಬೇಕು. ಸರ್ಕಾರದಿಂದ ಅನುದಾನ ಪಡೆಯುವ ಶಾಲೆಗಳು, ಶಾಲೆಯ ಪೂರ್ತಿ ಖರ್ಚಿನಲ್ಲಿ ಸರ್ಕಾರ ಶೇಕಡವಾರು ಎಷ್ಟು ಭಾಗ ಹಣ ಕೊಡುತ್ತದೋ, ಅಷ್ಟು ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕು. (ಉದಾಹರಣೆಗೆ, 100 ರುಪಾಯಿ ಖರ್ಚಿಗೆ, 30 ರುಪಾಯಿ ಸರ್ಕಾರ ಕೊಟ್ಟರೆ, 100 ಮಕ್ಕಳಲ್ಲಿ 30 ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕು) ಖಾಸಗಿ (ಸರ್ಕಾರದಿಂದ ಅನುದಾನ ಪಡೆಯದಿರುವ) ಶಾಲೆಗಳು 100 ಮಕ್ಕಳಲ್ಲಿ ಕನಿಷ್ಠ 25 ಮಕ್ಕಳಿಗೆ ಉಚಿತವಾಗಿ ಶಿಕ್ಷಣ ನೀಡಬೇಕು. ಈ ರೀತಿ ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಉಚಿತ ಶಿಕ್ಷಣ ಪಡೆದ ಮಕ್ಕಳ ಶುಲ್ಕವನ್ನು ಸರ್ಕಾರ ನಿಯಮಾನುಸಾರ ಶಾಲೆಗೆ ಕೊಡುತ್ತದೆ.



# ಪ್ರಕರಣ 13

ಪ್ರಾಥಮಿಕ ಶಿಕ್ಷಣವನ್ನು ಪೂರೈಸಲು ಅಡ್ಡಿಯಾಗುವಂತಹ ಯಾವುದೇ ಶುಲ್ಕ (ಡೊನೇಷನ್/ ಕ್ಯಾಪಿಟೇಷನ್ ಫೀ) ಅಥವಾ ವೆಚ್ಚಗಳನ್ನು ಶಾಲೆಯು ನಿಮ್ಮಿಂದ ತೆಗೆದುಕೊಳ್ಳುವಂತಿಲ್ಲ. ಹಾಗೆಯೇ ನಿಮ್ಮನ್ನು ಅಥವಾ ನಿಮ್ಮ ತಂದೆ-ತಾಯಿ/ಪೋಷಕರನ್ನು ಯಾವುದೇ ರೀತಿಯ ಪ್ರವೇಶ ಪರೀಕ್ಷೆಗೆ ಒಳಪಡಿಸುವಂತಿಲ್ಲ. ಯಾವುದೇ ಶಾಲೆ ಅಥವಾ ವ್ಯಕ್ತಿ ಆ ರೀತಿ ಮಾಡಿದರೆ, ಆ ಶಾಲೆಗೆ ಅಥವಾ ವ್ಯಕ್ತಿಗೆ ಕಾನೂನಿನಲ್ಲಿ ಸೂಚಿಸಿದ ದಂಡ ವಿಧಿಸಲಾಗುತ್ತದೆ.



# ಪ್ರಕರಣ 14


ನಿಮ್ಮ ಬಳಿ ವಯಸ್ಸಿನ ದಾಖಲೆ ಇಲ್ಲ ಎಂದು ನಿಮಗೆ ಶಾಲಾ ದಾಖಲಾತಿ ಅಥವಾ ಪ್ರವೇಶವನ್ನು ನಿರಾಕರಿಸುವಂತಿಲ್ಲ. ಒಂದುವೇಳೆ ಜನನ ಪ್ರಮಾಣ ಪತ್ರ ಅಥವಾ ಬೇರೆ ಯಾವುದೇ ದಾಖಲೆ ಇಲ್ಲದಿದ್ದರೆ, ನಿಮ್ಮ ವಯಸ್ಸನ್ನು ನಿಮ್ಮ ತಂದೆ-ತಾಯಿ ಅಥವ ಪೋಷಕರಿಂದ ತಿಳಿದುಕೊಳ್ಳಬೇಕು.

# ಪ್ರಕರಣ 15

ನೀವು ಶಾಲೆ ಸೇರಿಕೊಳ್ಳಲು ತಡವಾಗಿ ಅರ್ಜಿ ಹಾಕಿದ್ದೀರಿ ಎಂದು ನಿಮಗೆ ಯಾವ ಶಾಲೆಯೂ ಪ್ರವೇಶ ನಿರಾಕರಿಸುವಹಾಗಿಲ್ಲ. ಆದರೆ ಆದಷ್ಟು ನೀವು ಶೈಕ್ಷಣಿಕ ವರ್ಷದ ಆರಂಭದಲ್ಲಿ ಶಾಲೆಗೆ ಸೇರಿಕೊಳ್ಳುವುದು ಉತ್ತಮ.

# ಪ್ರಕರಣ 16

ನೀವು 8ನೇ ತರಗತಿ ಮುಗಿಸುವವರೆಗೂ, ನಿಮ್ಮನ್ನು ಒಂದೇ ತರಗತಿಯಲ್ಲಿ ಒಂದು ಶೈಕ್ಷಣಿಕ ವರ್ಷಕ್ಕಿಂತ ಹೆಚ್ಚು ತಡೆಹಿಡಿಯುವುದಾಗಲೀ ಅಥವ ಶಾಲೆಯಿಂದ ಹೊರಹಾಕುವುದಾಗಲೀ ಮಾಡುವಹಾಗಿಲ್ಲ. ನಿಮಗೆ 8ನೇ ತರಗತಿಯವರೆಗೆ ನಿರಂತರವಾಗಿ ಶಾಲೆಯಲ್ಲಿ ಮುಂದುವರಿಯಲು ಅವಕಾಶವಿದೆ.



# ಪ್ರಕರಣ 17

ನಿಮಗೆ ಶಾಲೆಯಲ್ಲಿ ಯಾವುದೇ ರೀತಿಯ ದೈಹಿಕ ದಂಡನೆ ಅಥವಾ ಮಾನಸಿಕ ಕಿರುಕುಳ ನೀಡುವಂತಿಲ್ಲ. ಆ ರೀತಿ ಶಿಕ್ಷೆ ನೀಡಿದವರಿಗೆ ಕಾನೂನಿನ ಪ್ರಕಾರ ಶಿಕ್ಷೆ ನೀಡಲಾಗುತ್ತದೆ.



# ಪ್ರಕರಣ 18


ಕಾನೂನು ಜಾರಿಯಾದ ನಂತರ ಸರ್ಕಾರದಿಂದ ಮಾನ್ಯತೆ ಪಡೆಯದೆ ಯಾವುದೇ ಶಾಲೆಯನ್ನು ನಡೆಸುವಂತಿಲ್ಲ.

# ಪ್ರಕರಣ 19


ನಿಮಗೆ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಸುವ್ಯವಸ್ಥಿತ ಶಾಲಾ ಕಟ್ಟಡ, ಕಾಂಪೌಂಡ್ ವಾಲ್, ಸುರಕ್ಷಿತ ಕುಡಿಯುವ ನೀರು, ಗಂಡು-ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ, ಕಲಿಕಾ ಸಾಮಗ್ರಿ, ಗ್ರಂಥಾಲಯ, ಆಟದ ಮೈದಾನ, ಆಟದ ಸಾಮಗ್ರಿಗಳು, ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಹಾಗೂ ತರಬೇತಿ ಪಡೆದ ಅರ್ಹ ಶಿಕ್ಷಕರ ನೇಮಕಾತಿ ಮಾಡುವುದು ಸರ್ಕಾರದ ಮತ್ತು ಸ್ಥಳೀಯ ಆಡಳಿತದ ಕರ್ತವ್ಯ.




# ಪ್ರಕರಣ 20



ಭಾರತ ಸರ್ಕಾರವು ನಿಮಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ, ನಿಮ್ಮ ಶಾಲೆಯಲ್ಲಿ ಇರಬೇಕಾದ ಸೌಕರ್ಯಗಳು ಮತ್ತು ಶಾಲೆಯ ಮಾನದಂಡಗಳನ್ನು ಯಾವಗಬೇಕಾದರೂ ಬದಲಾಯಿಸಬಹುದು.






# ಪ್ರಕರಣ 21

ನಿಮ್ಮ ಶಾಲೆಯಲ್ಲಿ ಶಾಲಾ ಮೇಲುಸ್ತುವಾರಿ ಸಮಿತಿ ಇರಬೇಕು. ನಮ್ಮ ರಾಜ್ಯದಲ್ಲಿ ಇದನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಎಂದು ಕರೆಯುತ್ತಾರೆ. ಅದರಲ್ಲಿ ನಿಮ್ಮ ಶಾಲೆಯಲ್ಲಿ ಓದುತ್ತಿರುವ ಒಂದು ಮಗು, ನಿಮ್ಮ ತಂದೆ-ತಾಯಂದಿರು/ ಪೋಷಕರು ಮತ್ತು ಶಿಕ್ಷಕರು ಸದಸ್ಯರಾಗಿರುತ್ತಾರೆ. ಈ ಸಮಿತಿ ನಿಮ್ಮ ಶಾಲೆ ಸರಿಯಾಗಿ ಕೆಲಸ ಮಾಡುವಂತೆ ಮತ್ತು ನಿಮ್ಮ ಶಿಕ್ಷಣಕ್ಕೆ ಯಾವುದೆ ತೊಂದರೆ ಬರದಂತೆ ನೋಡಿಕೊಳ್ಳುತ್ತದೆ. ಜೊತೆಗೆ, ನಿಮ್ಮ ಶಾಲೆಯ ಖರ್ಚು-ವೆಚ್ಚಗಳ ಮೇಲ್ವಿಚಾರಣೆ ಮಾಡುತ್ತದೆ.



# ಪ್ರಕರಣ 22

ಶಾಲಾ ಮೇಲುಸ್ತುವಾರಿ ಸಮಿತಿಯು ನಿಮ್ಮ ಶಾಲೆಯ ಅಭಿವೃದ್ಧಿಗಾಗಿ ಶಾಲಾ ಅಭಿವೃದ್ಧಿ ಯೋಜನೆಯನ್ನು ತಯಾರಿಸಬೇಕು. ಸರ್ಕಾರವು ಈ ಯೋಜನೆಗೆ ತಕ್ಕಂತೆ ಅನುದಾನ (ಹಣ) ನೀಡಬೇಕು.



# ಪ್ರಕರಣ 23

ನಿಮ್ಮ ಶಾಲೆಯಲ್ಲಿ ಕಲಿಸುವ ಎಲ್ಲಾ ಶಿಕ್ಷಕರಿಗೂ ಕನಿಷ್ಠ ಡಿ.ಎಡ್ ಅಥವ ಬಿ.ಎಡ್ ವಿದ್ಯಾರ್ಹತೆ ಇರಬೇಕು.

# ಪ್ರಕರಣ 24

## ನಿಮ್ಮ ಶಿಕ್ಷಕರು

- ಸಮಯಕ್ಕೆ ಸರಿಯಾಗಿ ಶಾಲೆಗೆ ಬರಬೇಕು
- ಸಮಯಕ್ಕೆ ಸರಿಯಾಗಿ ಪಾಠ ಮುಗಿಸಬೇಕು
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಮೂಲಕ ನಿಮ್ಮ ಕಲಿಕಾ ಸಾಮರ್ಥ್ಯವನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ಪಾಠ ಮಾಡಬೇಕು
- ನೀವು ಆಕಸ್ಮಿಕವಾಗಿ ಕಲಿಕೆಯಲ್ಲಿ ಹಿಂದುಳಿದಿದ್ದರೆ ಶಿಕ್ಷಕರು ನಿಮಗೆ ವಿಶೇಷ ಪರಿಹಾರ ಬೋಧನಾ ತರಗತಿಗಳನ್ನು ನಡೆಸಬೇಕು
- ನಿಮ್ಮ ತಂದೆ-ತಾಯಿ ಅಥವ ಪೋಷಕರ ಜೊತೆ ನಿಮ್ಮ ಕಲಿಕೆ ಪ್ರಗತಿಯ ಬಗ್ಗೆ ಕಾಲ-ಕಾಲಕ್ಕೆ ಸಭೆಗಳನ್ನು ತಪ್ಪದೇ ನಡೆಸಬೇಕು ಮತ್ತು
- ನಿಮ್ಮ ಕಲಿಕೆಗೆ ಪೂರಕವಾದ ಇತರೆ ಯಾವುದೇ ಕರ್ತವ್ಯಗಳನ್ನು ನಿಮ್ಮ ಶಿಕ್ಷಕರು ನಿರ್ವಹಿಸಬೇಕು.

# ಪ್ರಕರಣ 25

ನಿಮ್ಮ ತರಗತಿಯಲ್ಲಿ ಇರುವ ಮಕ್ಕಳ ಸಂಖ್ಯೆಗೆ ಬೇಕಾದಷ್ಟು ಶಿಕ್ಷಕರನ್ನು ಸರ್ಕಾರ ನೇಮಿಸಬೇಕು.


- ☑ 1 ರಿಂದ 5ನೇ ತರಗತಿಯವರೆಗೆ – 1 ರಿಂದ 60 ಮಕ್ಕಳಿಗೆ 2 ಶಿಕ್ಷಕರು
- ☑ 6 ರಿಂದ 8ನೇ ತರಗತಿಯವರೆಗೆ – ಪ್ರತಿ 35 ಮಕ್ಕಳಿಗೆ ಕನಿಷ್ಠ 1 ಶಿಕ್ಷಕರು; 1 ಮುಖ್ಯೋಪಾಧ್ಯಾಯರು; ವಿಷಯಕ್ಕೆ ಒಬ್ಬ ಶಿಕ್ಷಕರು ಮತ್ತು ತರಗತಿಗೆ ಒಬ್ಬ ಶಿಕ್ಷಕರು

# ಪ್ರಕರಣ 26

ಸರ್ಕಾರವು ನಿಮ್ಮ ಶಾಲೆಯಲ್ಲಿ ಶಿಕ್ಷಕರ ಕೊರತೆ 10% ಕ್ಕಿಂತ ಜಾಸ್ತಿ ಇರದಂತೆ ನೋಡಿಕೊಳ್ಳಬೇಕು. (ಉದಾಹರಣೆಗೆ, ನಿಮ್ಮ ಶಾಲೆಗೆ 10 ಶಿಕ್ಷಕರ ಅಗತ್ಯವಿದ್ದರೆ, ಯಾವಾಗಲೂ ಕನಿಷ್ಠ 9 ಶಿಕ್ಷಕರಾದರೂ ನಿಮ್ಮ ಶಾಲೆಯಲ್ಲಿ ಇರುವಂತೆ ಸರ್ಕಾರ ನೋಡಿಕೊಳ್ಳಬೇಕು)

# ಪ್ರಕರಣ 27

ಜನಗಣತಿ, ನೈಸರ್ಗಿಕ ವಿಪತ್ತು ಪರಿಹಾರ ಕಾರ್ಯಗಳು ಅಥವಾ ಚುನಾವಣೆಗೆ ಸಂಬಂಧಿಸಿದ ಕೆಲಸಗಳಿಗೆ ಹೊರತಾಗಿ ನಿಮ್ಮ ಶಿಕ್ಷಣಕ್ಕೆ ಸಂಬಂಧವಿಲ್ಲದ ಬೇರೆ ಯಾವುದೇ ಕೆಲಸಗಳಿಗೆ ನಿಮ್ಮ ಶಿಕ್ಷಕರನ್ನು ನಿಯೋಜನೆ ಮಾಡುವಹಾಗಿಲ್ಲ.



# ಪ್ರಕರಣ 28

ನಿಮ್ಮ ಶಿಕ್ಷಕರು ಯಾರಿಗೂ ಮನೆ ಪಾಠ ಮಾಡುವಹಾಗಿಲ್ಲ.

# ಪ್ರಕರಣ 29

ಸರ್ಕಾರ ನೇಮಿಸುವ ಶೈಕ್ಷಣಿಕ ಪ್ರಾಧಿಕಾರವು ನಿಮ್ಮ ಪಠ್ಯಕ್ರಮವನ್ನು ಸೂಚಿಸುತ್ತದೆ. ನಿಮ್ಮ ಪಠ್ಯಕ್ರಮವು ನಿಮ್ಮ ಸರ್ವತೋಮುಖ ಬೆಳವಣಿಗೆಗೆ, ನಿಮ್ಮ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಬೆಳೆಸಲು ಪೂರಕವಾಗಿರಬೇಕು. ನಿಮಗೆ ಭಯ – ಆತಂಕ ಪಡಿಸದಂತಹ ಸುರಕ್ಷಿತ ವಾತಾವರಣದಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ವಿಧಾನವನ್ನು ಅನುಸರಿಸಿ ಮಕ್ಕಳ–ಸ್ನೇಹಿ ರೀತಿಯಲ್ಲಿ ಶಿಕ್ಷಕರು ನಿಮಗೆ ಪಾಠ ಮಾಡುವಂತೆ ಇರಬೇಕು.



# ಪ್ರಕರಣ 30

ನೀವು ೮ನೇ ತರಗತಿ ಮುಗಿಸುವವರೆಗೂ ಯಾವುದೇ ಬೋರ್ಡ್ ಪರೀಕ್ಷೆಯನ್ನು ಬರೆಯಬೇಕಿಲ್ಲ ಮತ್ತು ನೀವು ೮ನೇ ತರಗತಿ ಮುಗಿಸಿದ ನಂತರ ನಿಮಗೆ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದ್ದಕ್ಕಾಗಿ ಪ್ರಮಾಣಪತ್ರವನ್ನು ನೀಡಬೇಕು.

# ಪ್ರಕರಣ 31

ರಾಷ್ಟ್ರ ಅಥವ ರಾಜ್ಯದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ನಿಮ್ಮ ಶಾಲೆಯು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ನಿಮಗೆ ಯಾವುದೇ ತೊಂದರೆಗಳು ಇದ್ದರೆ ನೀವು ಈ ಆಯೋಗಕ್ಕೆ ದೂರು ಕೊಡಬಹುದು. ಆಯೋಗವು ನಿಮ್ಮ ದೂರನ್ನು ಪರಿಶೀಲಿಸಿ ಪರಿಹಾರ ಸೂಚಿಸಬೇಕು.

# ಪ್ರಕರಣ 32

ನಿಮ್ಮ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ತೊಂದರೆ ಇದ್ದರೆ, ಅದರ ಬಗ್ಗೆ ನೀವು ಅಥವ ಬೇರೆ ಯಾರಾದರೂ ನಿಮ್ಮ ಪಂಚಾಯಿತಿ/ ನಗರಸಭೆ/ ಪುರಸಭೆಗೆ ದೂರು ಕೊಡಬಹುದು. ಅವರು ದೂರು ಕೊಟ್ಟ 3 ತಿಂಗಳುಗಳ ಒಳಗೆ ದೂರನ್ನು ಪರಿಶೀಲಿಸಿ ಪರಿಹಾರ ಕೊಡಬೇಕು. ನಿಮಗೆ ಯಾವುದೇ ಆಡಳಿತಾತ್ಮಕ ವ್ಯವಸ್ಥೆಗಳಿಂದ ಪರಿಹಾರ ಸಿಗದಿದ್ದರೆ, ನೀವು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ದೂರು ಕೊಡಬಹುದು.

# ಪ್ರಕರಣ 33-39

ಈ ಪ್ರಕರಣಗಳು ಮೇಲೆ ತಿಳಿಸಿದ ನಿಮ್ಮ ಯಾವುದೇ ಹಕ್ಕುಗಳಿಂದ ನೀವು ವಂಚಿತರಾಗದಿರುವಂತೆ ನೋಡಿಕೊಳ್ಳುವುದಕ್ಕೆ ಸರ್ಕಾರದ ಜವಾಬ್ದಾರಿಗಳು ಏನು ಎನ್ನುವುದನ್ನು ಸೂಚಿಸುತ್ತವೆ.

# ನಿಮಗೆ ಇರುವ ಹಕ್ಕುಗಳು

ಬದುಕುವ ಹಕ್ಕು

ಬೆಳವಣಿಗೆ ಹೊಂದುವ ಹಕ್ಕು

ಪೌಷ್ಟಿಕ ಮತ್ತು ಸಮತೋಲನ
ಆಹಾರ ಪಡೆಯುವ ಹಕ್ಕು

ಉತ್ತಮ ಆರೋಗ್ಯ ಹೊಂದುವ
ಹಕ್ಕು

ಗುಣಮಟ್ಟದ ಶಿಕ್ಷಣ
ಪಡೆಯುವ ಹಕ್ಕು

ಆಟವಾಡುವ ಮತ್ತು ವಿಶ್ರಾಂತಿ
ಪಡೆಯುವ ಹಕ್ಕು

ರಕ್ಷಣೆಯ ಹಕ್ಕು

ಮಾಹಿತಿ ಪಡೆಯುವ ಹಕ್ಕು

ಭಾಗವಹಿಸುವ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು

ಸಮಾನತೆಯ ಹಕ್ಕು

ಘನತೆ ಮತ್ತು ಸ್ವಾಭಿಮಾನದ ಹಕ್ಕು

ಗೌಪ್ಯತೆಯ ಹಕ್ಕು

# ಟಿಪ್ಪಣಿ

# ಭಾರತದ ಸಂವಿಧಾನದ ಅಡಿಯಲ್ಲಿ ನಿಮ್ಮ ಶಿಕ್ಷಣದ ಹಕ್ಕು

## ವಿಧಿ 21ಎ

ನಿಮ್ಮ ವಯಸ್ಸು 06 ರಿಂದ 14 ವರ್ಷದೊಳಗೆ ಇದ್ದರೆ ನಿಮಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕು ಇದೆ. ಸರ್ಕಾರ ಇದಕ್ಕಾಗಿಯೇ ಒಂದು ಕಾನೂನನ್ನು ರೂಪಿಸಿ ಅದರಂತೆ ನಿಮಗೆ ಉಚಿತ ಶಿಕ್ಷಣವನ್ನು ಕಡ್ಡಾಯವಾಗಿ ನೀಡಬೇಕು.

## ವಿಧಿ 45

ಸರ್ಕಾರವು 6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಆರೈಕೆ ಮತ್ತು ಪೂರ್ವ-ಪ್ರಾಥಮಿಕ ಶಿಕ್ಷಣ ನೀಡಲು ಕ್ರಮ ತೆಗೆದುಕೊಳ್ಳಬೇಕು.

## ವಿಧಿ 51ಎ(ಕೆ)

ನಿಮ್ಮ ವಯಸ್ಸು 6 ರಿಂದ 14 ವರ್ಷದೊಳಗಿದ್ದರೆ, ನಿಮ್ಮ ತಂದೆ-ತಾಯಿ ಅಥವಾ ಪೋಷಕರು ನಿಮಗೆ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡಬೇಕು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮಗು ಮತ್ತು ಕಾನೂನು ಕೇಂದ್ರ
ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ
ಯೂನಿವರ್ಸಿಟಿ
ನಾಗರಭಾವಿ, ಬೆಂಗಳೂರು – 560242

ದೂರವಾಣಿ ಸಂಖ್ಯೆ: 91-80-23160528
ಈ–ಮೈಲ್: ccl@nls.ac.in
ವೆಬ್‌ಸೈಟ್: www.nls.ac.in/ccl

ಬೆಂಬಲ

125
YEARS OF
TATA TRUSTS

PRIVILEGED TO SERVE.
SINCE 1892.